ಈ) ಆಗಿಂದಾಗ್ಗೆ ಪಡೆಯಲಾಗುವ ದೂರುಗಳ ಲೋಪದೋಷ ದೂರುಗಳನ್ನು ಸರಿಪಡಿಸಲು ಕ್ರಮ ವಹಿಸಲಾಗುತ್ತಿದೆ.

ಜವಳಿ ಉದ್ಯಮದ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದ ಧನ ಸಹಾಯ

3119 (3783) : ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೇಂದ್ರ ಸರ್ಕಾರವು ರಾಜ್ಯಕ್ಕೆ ಜವಳಿ ಇಲಾಖೆಯಿಂದ ಜವಳಿ ಉದ್ಯಮದ ಅಭಿವೃದ್ಧಿಗಾಗಿ ಧನ ಸಹಾಯ ಏನಾದರೂ ನೀಡಿದೆಯೆ?

ಆ) ನೀಡಿದ್ದರೆ 2001 ರಿಂದ ಇಲ್ಲಿಯವರೆಗೆ ಎಷ್ಟು ಅನುದಾನವನ್ನು ಒದಗಿಸಿದೆ?

ಇ) ಈ ಹಣವನ್ನು ರಾಜ್ಯ ಸರ್ಕಾರವು ಪೂರ್ಣವಾಗಿ ಉಪಯೋಗಿಸಿದೆಯೇ? ಉಪಯೋಗಿಸಿದ್ದಲ್ಲಿ ಯಾವ ಯಾವ ಅಭಿವೃದ್ಧಿ ಕಾರ್ಯವನ್ನು ಅದರಡಿ ಕೈಗೊಂಡಿದೆ?

ಈ) ಉಪಯೋಗಿಸದೇ ಇದ್ದಲ್ಲಿ ಕಾರಣಗಳೇನು?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು):

ಅ) ಹೌದು

ಆ)

ವರ್ಷ	ರೂ.
2000–01	291.86 ಲಕ್ಷ
2001–02	471.81 ಲಕ್ಷ
2002–03	494.35 ಲಕ್ಷ
ಒಟ್ಟು	**1258.02 ಲಕ್ಷ**

ಇ) ರಾಜ್ಯ ಸರ್ಕಾರ ಆ ಹಣವನ್ನು ಪೂರ್ತಿಯಾಗಿ ವಿನಿಯೋಗಿಸಿದೆ. ಆ ಸಂಬಂಧದ ಯೋಜನಾವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ) ಉದ್ಭವಿಸುವುದಿಲ್ಲ.

2000–01 ರಿಂದ 2002–03 ನೇ ಸಾಲಿನವರೆಗೆ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಹಣ ವಿವರ

ರೂ. ಲಕ್ಷಗಳಲ್ಲಿ

ಕ್ರ ಸಂ	ಯೋಜನೆಗಳ ಹೆಸರು	2000–01	2001–02	2002–03
1	ಉಳಿತಾಯ ನಿಧಿ ಯೋಜನೆ ಕೈಸಸಂ	15.00	10.00	5.00
2	ಏಳಿಗೆ ನಿಧಿಯೋಜನೆ ಕೆಹೆಚ್‌ಡಿಸಿ	15.00	10.00	5.00
3	ಕೈಮಗ್ಗ ನೇಕಾರರಿಗಾಗಿ ಸಾಮೂಹಿಕ ಉಳಿತಾಯ ಸಂಬಂಧಿಸಿದ ವಿಮಾ ಯೋಜನೆ	–	14.13	7.51
4	ಸಮಗ್ರ ಆರೋಗ್ಯ ಪ್ರಸ್ತಾವ ಯೋಜನೆ	–	–	49.59
5	ವಸತಿ ಹಾಗೂ ಕಾರ್ಯಾಗಾರ	57.07	113.10	250.00

6	ದೀನ್ ದಯಾಳ್‌ಹತ್‌ಕರ್ಗಾ ಯೋಜನೆ ಕೆ ಹೆಚ್ ಡಿ ಸಿ	–	257.37	97.36
7	ದೀನ್ ದಯಾಳ್‌ಹತ್‌ಕರ್ಗಾ ಯೋಜನೆ ಸಹಕಾರ	–	41.13	38.56
8	ಮಾರುಕಟ್ಟೆ ಅಭಿವೃದ್ಧಿ ಯೋಜನೆ:ಸಹಕಾರ	29.81	–	–
9	ಮಾರುಕಟ್ಟೆ ಅಭಿವೃದ್ಧಿ ಯೋಜನೆ ಕೆ ಹೆಚ್ ಡಿ ಸಿ	150.91	–	–
10	ಕೈಮಗ್ಗ ನೇಕಾರರಿಗೆ ಸಮಗ್ರ ಪ್ರಸ್ತಾವ ಯೋಜನೆ	18.16	20.27	18.74
11	ಜಿಲ್ಲಾಮಟ್ಟದ ವಸ್ತು ಪ್ರದರ್ಶನ	5.91	5.81	3.59
12	ರಾಷ್ಟ್ರೀಯ ಕೈಮಗ್ಗ ಮೇಳ	–	–	19.00
	ಒಟ್ಟು	**291.86**	**471.81**	**494.35**

ರಾಜ್ಯದಲ್ಲಿ ಹೊಸ ಕೈಗಾರಿಕಾ ನೀತಿ

3120 (3784) : ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸ ಕೈಗಾರಿಕಾ ನೀತಿಯು ಜಾರಿಗೆ ಬಂದಿರುವುದೇ; ಯಾವಾಗ ಈ ಕೈಗಾರಿಕಾನೀತಿಯನ್ನು ಜಾರಿಗೆ ತರಲಾಯಿತು; ಈ ಹೊಸ ಕೈಗಾರಿಕಾ ನೀತಿಯ ಉದ್ದೇಶಗಳೇನು;

ಆ) ಹೊಸ ಕೈಗಾರಿಕಾ ನೀತಿಯಂತೆ ಕೈಗಾರಿಕೆಗಳನ್ನು ವರ್ಗೀಕರಿಸಲಾಗಿದೆಯೇ; ಹಾಗಾದರೆ ಎಷ್ಟು ವರ್ಗಗಳನ್ನು ಮಾಡಲಾಗಿದೆ;

ಇ) ಬಿಜಾಪುರ ಜಿಲ್ಲೆಯನ್ನು ಹೊಸ ಕೈಗಾರಿಕಾ ನೀತಿಯಡಿ ಯಾವ ವರ್ಗವನ್ನು ಮಾಡಲಾಗಿದೆ;

ಈ) ಸೇರಿಸಿರುವ ವರ್ಗದಡಿ ಬಿಜಾಪುರ ಜಿಲ್ಲೆಗೆ ಆಗುವ ಲಾಭಗಳೇನು;

ಉ) ಹೊಸ ಕೈಗಾರಿಕಾ ನೀತಿಯಡಿ ಬಿಜಾಪುರ ಜಿಲ್ಲೆಯ ಕೈಗಾರಿಕಾ ಪ್ರದೇಶದಲ್ಲಿ ಯಾವ ಯಾವ ಯೋಜನೆಗಳನ್ನು ರೂಪಿಸಲಾಗಿದೆ;

ಊ) ರೂಪಿಸಿದ್ದರೆ, ಅಂತಹ ಯೋಜನೆಗಳು ಯಾವುವು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ಕರ್ನಾಟಕ ರಾಜ್ಯವು 2001–02ನೇ ಸಾಲಿನಲ್ಲಿ ತನ್ನ ಹೊಸ ಕೈಗಾರಿಕಾ ನೀತಿಯನ್ನು ದಿ:1.4.2001 ರಲ್ಲಿ ಜಾರಿಗೆ ತಂದಿತು. ಹೊಸ ಕೈಗಾರಿಕಾ ನೀತಿಯ ಉದ್ದೇಶಗಳು ಈ ಕೆಳಕಂಡಂತಿವೆ:

ಅ. ಕ್ಷಿಪ್ರವಾದ ತಂತ್ರಜ್ಞಾನ ಉನ್ನತೀಕರಣ

ಆ. ವಿವಿಧ ಕ್ಷೇತ್ರಗಳಾದ ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಮಾನವ ಸಂಪನ್ಮೂಲಗಳ ಉಪಯೋಗ ಪೂರ್ಣ ಪ್ರಮಾಣದಲ್ಲಿ ಮಾಡಲು ಉತ್ತೇಜಿಸುವುದು.

ಇ. ಸೇವಾಕ್ಷೇತ್ರದಲ್ಲಿ ಜ್ಞಾನಾಧಾರಿತ ಕೈಗಾರಿಕೆಗಳಿಗೆ ಒತ್ತಾಸೆ ಹಾಗೂ ಮಾನವ ಸಂಪನ್ಮೂಲ ಅಭಿವೃದ್ಧಿ

ಈ. ಕೈಗಾರಿಕೆಗಳಿಗೆ ಉನ್ನತಮಟ್ಟದ ಮೂಲಭೂತ ಸೌಕರ್ಯಗಳನ್ನು ನೀಡುವುದು.